10BTC 11165

**OS – 323**

**V Semester B.Com. Examination, October/November 2012**
**(Semester Scheme)**
**Paper – 5.2 : INCOME TAX – I**

Time : 3 Hours | Max. Marks : 90

***Instruction :*** *Answer should be written* ***completely*** *in* ***Kannada*** *or in* ***English.***

SECTION – A

Answer **any ten** of the following. **Each** question carries **two** marks. **(10×2=20)**

1. a) Define "Assessment Year".

   b) Give the meaning of Agricultural Income.

   c) Who is a specified assessee ?

   d) Who is resident and ordinarily resident ?

   e) Mention any four tax-free perquisites.

   f) What is meant by composite rent ?

   g) What is Canon of certainty ?

   h) Who is "Assessee in default" ?

   i) How do you treat professional tax paid by employer on behalf of employees ?

   j) What do you mean by Capital Receipt ? Give an example.

   k) Define the term "Person".

   l) What is Standard Rent ?

**P.T.O.**

## SECTION – B

Answer **any five** of the following. **Each** question carries **five** marks. **(5×5=2**

2. Briefly explain the income tax treatment of RPF and SPF.

3. Distinguish between Capital Expenditure and Revenue Expenditure.

4. State whether the following incomes are agricultural or non-agricultural incomes.

   a) Sale of plants from nursery.

   b) Interest on loan given to a farmer.

   c) Income from agricultural activities in Srilanka.

   d) Lease rent received from lands given to tenants for agricultural purpose.

   e) Income from sale of forest trees of spontaneous growth.

5. Mr. Rishab a citizen of U.K. came to India for the first time on 1-5-2005. He stayed here without any break for 3 years and left for Bangladesh on 1-5-2008. He returned to India on 1-4-2009 and went back to U.K. on 1-12-2009. He was posted back to India on 20-1-2012.

   Determine his residential status for the A.Y. 2012-13.

6. Mr. Nataraj is employed in a town (population 13 lakh). His particulars of income for the A.Y. 2012-13 are :

   - Basic salary ₹ 8,000 per month.
   - D.A. ₹ 2,000 per month [60% doesn't enters into service benefits].

http://www.onlinebu.com

- Entertainment allowance ₹ 500 per month.
- Bonus ₹ 8,000 per annum.
- He has been provided with rent free accommodation, the cost of furniture provided being ₹ 20,000.

Compute his taxable income from salary for the A.Y. 2012-13.

7. Compute the annual value from the following information :

| | |
|---|---|
| a) Municipal Rental Value | ₹ 50,000 |
| b) Fair Rental Value | ₹ 72,000 |
| c) Let out | ₹ 8,000 per month |
| d) Standard Rental Value | ₹ 60,000 |
| e) Municipal tax paid in P.Y. | |
| P.Y.2010-11 | ₹ 10,000 |
| P.Y. 2011-12 | ₹ 10,000 |

8. Mr. Vinodh retired from services on 31-3-2011. His pension was fixed at ₹ 8000 per month. He commutes $3/4^{th}$ of his pension and received ₹ 7,20,000 in P.Y. 2011-12. Find out the taxable amount of commuted pension when

   i) He is Government employee.

   ii) He is non-government employee receives gratuity.

   iii) He is non-government employee who doesn't receives gratuity.

9. Mr. Syed started the construction of house on 1-6-2008 and took a loan of ₹ 3,00,000 at 15% p.a. He took another loan of ₹ 9,00,000 at 18% p.a. on 1-4-2011. The construction was completed on 30-11-2011 and was self occupied from 1-12-2011.

   Compute his income from House Property for the A.Y. 2012-13.

## SECTION – C

Answer **any three** of the following. **Each** question carries **fifteen** marks. **(3×15=45**

10. From the following particulars of Mr. Manjunath compute his Gross Total Income for the A.Y. 2012-13 if he is :

    a) Resident  b) Not-ordinarily resident  c) Non-resident.

    a) Income from business in Chennai, business managed from Srilanka ₹ 25,000.

    b) Income from House Property in Mysore ₹ 1,00,000.

    c) Income from salary in Japan ₹ 1,60,000.

    d) Income from business in Kuwait, business being controlled from Mumbai (₹ 25,000 is received in India) ₹ 65,000.

    e) Income from agriculture in Punjab, received in Mumbai ₹ 30,000.

    f) Income from agriculture in Bangladesh remitted to India ₹ 10,000.

    g) Profit from sale of building in India ₹ 2,50,000.

    h) Profit from business in Indonesia; this business controlled from Delhi ₹ 40,000.

    i) Income from Indian partnership firm ₹ 5,000.

    j) Interest on Savings Bank deposits in State Bank of India ₹ 1,000.

    k) Dividend from foreign company received in England ₹ 10,000.

    l) Interest on German Development Bonds ( $\frac{1}{3}$ received in India) ₹ 51,000.

http://www.onlinebu.com

11. Mr. Kiran is working in a private company in Bangalore. From the following details of his salary compute the income from salary for the A.Y. 2012-13.

a) Net basic salary ₹ 74,000. After deduction of tax at source of ₹ 8,000 in the year.

b) D.A. ₹ 800 per month (not forming part of salary).

c) Bonus equal to 3 months basic salary.

d) House Rent Allowances ₹ 800 per month, but he is paying rent of ₹ 1,200 per month for his residence in Bangalore.

e) His son is studying in a residential school in Mysore and company paying education allowances of ₹ 4,000 and hostel allowances ₹ 4,000 yearly.

f) He is contributing to RPF at 15% of salary and the company contributing an equal amount.

g) Interest earned on RPF ₹ 4,200 at 14% p.a.

h) Conveyance allowance ₹ 8,500 of which he spent ₹ 5,500 for official purpose.

i) He is the member of Lions Club an annual membership fees ₹ 2,000 paid by company.

j) Kiran has a telephone in his residence for personal and official use and its bill ₹ 5,000 paid by the company.

k) He paid ₹ 510 Professional Tax.

12. Mr. Surya has three houses in Bangalore particulars of which are as follows :

| Particulars | House I | House II | House III |
|---|---|---|---|
| Use of house | Let out | Let out | S.O.P. |
| Standard rental value | 15,000 | 20,000 | – |
| Municipal rental value | 10,000 | 30,000 | 30,000 |
| Fair rental value | 18,000 | 18,000 | 35,000 |
| Actual rent per month | 1,500 | 2,000 | – |
| Municipal tax paid | 10% of Municipal value | 10% of Municipal value | 10% of Municipal value |
| Repairs | – | – | 200 |

Surya borrows ₹ 30,000 at 20% p.a. for construction of House III (Date of Borrowing : 1-6-2004; date of repayment of loan 10-5-2012) construction of all the houses is completed in May 2009.

Determine the taxable income of Surya under the head Income from House Property for the A.Y. 2012-13.

13. Following are the particulars of salary of Mr. Kapoor.

a) Basic salary ₹ 35,000 per month.

b) Dearness allowances 50% of basic salary.

c) Entertainment allowances ₹ 10,000 per month (actual expenses ₹ 8,900 per month).

d) Rent free furnished house is provided, which is owned by the company and its fair value ₹ 12,000 per month.

e) Furniture costing ₹ 2,50,000 is also provided.

http://www.onlinebu.com

f) Services of the following servants (paid by company) are provided.

* Watchman ₹ 1,000 per month
* Gardner ₹ 750 per month
* Sweeper ₹ 800 per month
* Cook ₹ 600 per month

The company also provided free supply of gas, electricity and water worth ₹ 18,000 per annum. The Company provides one large car [more than 1600CC] with driver for both official and personal use expenses met by company. He paid employment tax ₹ 500 per month.

He works as MD of Royal Airways Ltd. Mumbai. Compute his net salary income for the A.Y. 2012-13.

14. Dr. Trivedi constructed a big house in July 2001, of which municipal valuation is ₹ 80,000 per annum. While its standard rent under Rent Control Act ₹ 90,000 per annum.

The house was used in the following manner during the previous year.

a) 25% portion for self residence.

b) 25% portion for own business.

c) 50% portion let out for residential purpose for rent ₹ 5,000 per month

Other particulars of the house are as follows :

i) Municipal tax ₹ 12,800 (actual payment during the previous year 2011-12 ₹ 9,000).

ii) Repairs ₹ 4,500.

iii) Fire Insurance Premium ₹ 2,000.

He has taken a loan from housing board to construct the house at 12% p.a. ₹ 2 lakh. Interest was due ₹ 24,000 during the previous year out of which ₹ 20,000 was paid.

Compute Income from House Property for the A.Y. 2012-13.

# ಕನ್ನಡ ಆವೃತ್ತಿ

## ವಿಭಾಗ – ಎ

ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು. (10×2=2

1. a) 'ತೆರಿಗೆ ವರ್ಷವನ್ನು' ವ್ಯಾಖ್ಯಾನಿಸಿ.

   b) ಕೃಷಿ ಆದಾಯದ ಅರ್ಥವನ್ನು ನೀಡಿ.

   c) ನಿರ್ದಿಷ್ಟ ತೆರಿಗೆದಾರ ಎಂದರೆ ಯಾರು ?

   d) ನಿವಾಸಿ ಮತ್ತು ಸಾಧಾರಣ ನಿವಾಸಿ ಎಂದರೆ ಯಾರು ?

   e) ಯಾವುದಾದರೂ ನಾಲ್ಕು ತೆರಿಗೆ ಮುಕ್ತ ಸೌಲಭ್ಯಗಳನ್ನು / ಭಕ್ಷೀಸುಗಳನ್ನು ತಿಳಿಸಿ.

   f) ಸಂಯುಕ್ತ ಬಾಡಿಗೆ ಎಂಬುದರ ಅರ್ಥವೇನು ?

   g) ಸ್ಥಿರತೆಯ ತತ್ವ ಎಂದರೇನು ?

   h) ತಪ್ಪಿತಸ್ಥ ತೆರಿಗೆದಾರ ಎಂದರೆ ಯಾರು ?

   i) ವೃತ್ತಿ ತೆರಿಗೆಯನ್ನು ನೌಕರನ ಪರವಾಗಿ ಮಾಲೀಕರು ನೀಡಿದರೆ ಹೇಗೆ ಪರಿಗಣಿಸುವಿರಿ ?

   j) ಬಂಡವಾಳ ಸ್ವೀಕೃತಿ ಎಂದರೇನು ? ಉದಾಹರಣೆ ಕೊಡಿ.

   k) "ವ್ಯಕ್ತಿ" ಎಂಬ ಪದವನ್ನು ವ್ಯಾಖ್ಯಾನಿಸಿ.

   l) ಶಿಷ್ಟ ಬಾಡಿಗೆ ಎಂದರೇನು ?

http://www.onlinebu.com

## ವಿಭಾಗ – ಬಿ

...ದರೂ 5 ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು. (5×5=25)

...PF ಮತ್ತು SPF ಗಳನ್ನು ತೆರಿಗೆಗಾಗಿ ಯಾವ ರೀತಿ ಪರಿಗಣಿಸಬೇಕು ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

... ಬಂಡವಾಳ ಖರ್ಚುಗಳಿಗೂ ಮತ್ತು ರಾಜಸ್ವ ಖರ್ಚುಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.

4. ಕೆಳಗಿನ ಆದಾಯವನ್ನು ವ್ಯವಸಾಯ ಮತ್ತು ವ್ಯವಸಾಯೇತರ ಆದಾಯಗಳಾಗಿ ವಿಂಗಡಿಸಿ :

   a) ನರ್ಸರಿಯಲ್ಲಿ ಬೆಳೆಸಿದ ಗಿಡಗಳ ಮಾರಾಟ.

   b) ರೈತನಿಗೆ ಕೊಟ್ಟ ಸಾಲದಿಂದ ಬರುವ ಬಡ್ಡಿ ಆದಾಯ.

   c) ಶ್ರೀಲಂಕಾದಲ್ಲಿ ಕೃಷಿ ಚಟುವಟಿಕೆಗಳಿಂದ ಬಂದ ಆದಾಯ.

   d) ಬಾಡಿಗೆದಾರರಿಗೆ ಭೂಮಿಯನ್ನು ಮೂಲ ವ್ಯವಸಾಯದ ಚಟುವಟಿಕೆ ನಡೆಸಲು ಬಾಡಿಗೆಗೆ ನೀಡಿದಾಗ ಬರುವ ಗುತ್ತಿಗೆ ಬಾಡಿಗೆ.

   e) ಕಾಡಿನಲ್ಲಿ ತನ್ನಷ್ಟಕ್ಕೇ ತಾನೇ ಬೆಳೆದ ಮರಗಳಿಂದ ಬರುವ ಆದಾಯ.

5. ಶ್ರೀ ರಿಷಬ್‌ರವರು ಯು.ಕೆ.ಯ ಪ್ರಜೆಯಾಗಿದ್ದು ಇವರು ಮೊದಲ ಬಾರಿಗೆ ದಿನಾಂಕ 1-5-2005 ರಲ್ಲಿ ಭಾರತಕ್ಕೆ ಬರುತ್ತಾರೆ. ಸತತ ಮೂರು ವರ್ಷಗಳ ಕಾಲ ಇಲ್ಲೇ ಉಳಿದುಕೊಳ್ಳುತ್ತಾರೆ. ಅನಂತರ ದಿನಾಂಕ 1-5-2008 ರಂದು ಬಾಂಗ್ಲಾದೇಶಕ್ಕೆ ಹೋಗುತ್ತಾರೆ. ಮತ್ತೆ 1-4-2009 ರಂದು ಭಾರತಕ್ಕೆ ಬರುತ್ತಾರೆ, ಬಂದವರು ಮತ್ತೆ 1-12-2009 ರಂದು ಯು.ಕೆ.ಗೆ ವಾಪಸ್ ಹೋಗುತ್ತಾರೆ. ಇವರು ಮತ್ತೊಮ್ಮೆ 20-1-2012 ರಂದು ಭಾರತಕ್ಕೆ ಮರಳಿ ತನ್ನ ಮೂಲ ಕೆಲಸಕ್ಕೆ ಸೇರಿಕೊಂಡರು. ಕರ ವರ್ಷ 2012-13 ಕ್ಕೆ ಶ್ರೀ ರಿಷಬ್‌ರವರ ನಿವಾಸಿ ಸ್ಥಿತಿಯನ್ನು ನಿರ್ಧರಿಸಿ.

6. ಶ್ರೀ ನಟರಾಜ್‌ರವರು 13 ಲಕ್ಷ ಜನಸಂಖ್ಯೆಯಿರುವ ನಗರದಲ್ಲಿ ಉದ್ಯೋಗದಲ್ಲಿದ್ದಾರೆ. ಇವರ ತೆರಿಗೆ ವರ್ಷ 2012–13 ರ ಆದಾಯ ಹೀಗಿವೆ.

- ಮೂಲ ವೇತನ ತಿಂಗಳಿಗೆ ₹ 8,000.
- ತುಟ್ಟಿ ಭತ್ಯೆ ತಿಂಗಳಿಗೆ ₹ 2,000 (60% ನಿವೃತ್ತಿ ವೇತನ ಲೆಕ್ಕಚಾರಕ್ಕೆ ಪರಿಗಣಿಸಲಾಗುವುದಿಲ್ಲ)
- ಮನೋರಂಜನಾ ಭತ್ಯೆ ತಿಂಗಳಿಗೆ ₹ 500.
- ಬೋನಸ್ ₹ 8,000 (ವರ್ಷಕ್ಕೆ)
- ಇವರಿಗೆ ಬಾಡಿಗೆ ರಹಿತ ವಸತಿಯ ಜೊತೆಗೆ ₹ 20,000 ಮೌಲ್ಯದ ಪೀಠೋಪಕರಣಗಳನ್ನು ಒದಗಿಸಿರುತ್ತಾರೆ.

ಕರ ವರ್ಷ 2012–13 ರ ತೆರಿಗೆಗೆ ಒಳಪಡುವ ಸಂಬಳ ಆದಾಯವನ್ನು ಲೆಕ್ಕಹಾಕಿ.

7. ಈ ಕೆಳಗಿನ ವಿವರಗಳಿಂದ ಮನೆ ಆಸ್ತಿಯ ಒಟ್ಟು ವಾರ್ಷಿಕ ಮೌಲ್ಯವನ್ನು ಕಂಡುಹಿಡಿಯಿರಿ :

| | |
|---|---|
| a) ಪೌರಾಡಳಿತ ಬಾಡಿಗೆ ಮೌಲ್ಯ | ₹ 50,000 |
| b) ನಿಖರ ಬಾಡಿಗೆ ಮೌಲ್ಯ | ₹ 72,000 |
| c) ನ್ಯೈಜ ಬಾಡಿಗೆ ತಿಂಗಳಿಗೆ | ₹ 8,000 |
| d) ನಿಗದಿತ ಮೌಲ್ಯ | ₹ 60,000 |

ಹಿಂದಿನ ವರ್ಷದಲ್ಲಿ ಪುರಸಭೆ ತೆರಿಗೆ ಕಟ್ಟಿದ್ದು

| | |
|---|---|
| 2010–11 | ₹ 10,000 |
| 2011–12 | ₹ 10,000 |

8. ಶ್ರೀ ವಿನೋದ್‌ರವರು ತಮ್ಮ ಕೆಲಸದಿಂದ 31–3–2011 ರಂದು ನಿವೃತ್ತಿ ಹೊಂದಿರುತ್ತಾರೆ. ಇವರ ನಿವೃತ್ತಿ ವೇತನ ಮಾಸಿಕ ₹ 8,000 ಎಂದು ನಿಗದಿಯಾಗಿತ್ತು. ಇವರು ಆದಾಯ ವರ್ಷ 2011–12 ರಲ್ಲಿ $3/4$ ರಷ್ಟು ನಿವೃತ್ತಿ ವೇತನವನ್ನು ಪರಿವರ್ತಿಸಿ ₹ 7,20,000 ಗಳನ್ನು ಪಡೆದಿರುತ್ತಾರೆ. ಈ ಕೆಳಗಿನ ಸಂದರ್ಭಗಳಲ್ಲಿ ಪರಿವರ್ತಿತ ನಿವೃತ್ತಿ ವೇತನದ ತೆರಿಗೆಗೊಳಪಡುವ ಮೊತ್ತವನ್ನು ಕಂಡು ಹಿಡಿಯಿರಿ.

a) ಇವರು ಸರ್ಕಾರಿ ನೌಕರ.

b) ಇವರು ಗ್ರಾಚ್ಯುಟಿ ಪಡೆಯುತ್ತಿರುವ ಸರ್ಕಾರೇತರ ನೌಕರ.

c) ಗ್ರಾಚ್ಯುಟಿ ಪಡೆಯದೆ ಇರುವ ಸರ್ಕಾರೇತರ ನೌಕರ.

http://www.onlinebu.com

[illegible]ರವರು ತಮ್ಮ ಮನೆಯ ನಿರ್ಮಾಣವನ್ನು 1-6-2008 ರಂದು ಪ್ರಾರಂಭಿಸಿದರು ಮತ್ತು ಇದಕ್ಕಾಗಿ ₹ 3,00,000 ಗಳನ್ನು ವಾರ್ಷಿಕ ಶೇಕಡಾ 15 ಬಡ್ಡಿಯಂತೆ ಸಾಲ ಪಡೆದಿರುತ್ತಾರೆ. ಇವರು 1-4-2011 ರಂದು ಮತ್ತೊಂದು ಸಾಲವನ್ನು ವಾರ್ಷಿಕ ಶೇಕಡಾ 18 ಬಡ್ಡಿಯಂತೆ ₹ 9,00,000ಗಳನ್ನು ಪಡೆದಿರುತ್ತಾರೆ. ಮನೆಯ ನಿರ್ಮಾಣವನ್ನು 30-11-2011 ರಂದು ಮುಗಿಸಿ ತಮ್ಮ ಸ್ವಂತ ವಾಸಕ್ಕೆ 1-12-2011 ರಿಂದ ಉಪಯೋಗಿಸುತ್ತಿದ್ದಾರೆ.

2012-13ರ ತೆರಿಗೆ ವರ್ಷಕ್ಕೆ ಇವರ ಮನೆ ಆಸ್ತಿ ಆದಾಯದ ಲೆಕ್ಕಮಾಡಿ.

## ವಿಭಾಗ – ಸಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನೈದು ಅಂಕಗಳು. **(3×15=45)**

10. ಶ್ರೀ ಮಂಜುನಾಥ ಈ ಕೆಳಕಂಡ ವಿವರಗಳನ್ನು ನೀಡಿರುತ್ತಾರೆ. ಆತನ ಸ್ಥೂಲ ಆದಾಯವನ್ನು 2012-13 ಕರ ವರ್ಷಕ್ಕೆ ಕಂಡು ಹಿಡಿಯಿರಿ. ಆತನು

    a) ನಿವಾಸಿಯಾಗಿದ್ದಾಗ

    b) ಸಾಧಾರಣವಲ್ಲದ ನಿವಾಸಿಯಾಗಿದ್ದಾಗ

    c) ಅನಿವಾಸಿಯಾಗಿದ್ದಾಗ

    a) ಚೆನ್ನೈನ ವ್ಯವಹಾರದಿಂದ ಬಂದ ಆದಾಯ, ವ್ಯವಹಾರವನ್ನು ಶ್ರೀಲಂಕಾದಿಂದ ನಿರ್ವಹಿಸಲಾಗುತ್ತಿದೆ ₹ 25,000.

    b) ಮೈಸೂರಿನಲ್ಲಿರುವ ಮನೆ ಆಸ್ತಿ ಆದಾಯ ₹ 1,00,000.

    c) ಜಪಾನಿನಿಂದ ಬಂದ ಸಂಬಳ ₹ 1,60,000.

    d) ಕುವೈತ್‌ನ ವ್ಯವಹಾರದಿಂದ ಬಂದ ಲಾಭ ಆದರೆ ವ್ಯವಹಾರ ನಿರ್ವಹಣೆಯು ಮುಂಬೈನಿಂದ ನಡೆಯುತ್ತಿದೆ (₹ 25,000 ಭಾರತದಲ್ಲಿ ಸ್ವೀಕರಿಸಲಾಯಿತು) ₹ 65,000.

    e) ಪಂಜಾಬ್‌ನಲ್ಲಿನ ವ್ಯವಸಾಯದಿಂದ ಬಂದ ಲಾಭ ಮುಂಬೈನಲ್ಲಿ ಸ್ವೀಕರಿಸಲಾಯಿತು ₹ 30,000.

f) ಬಾಂಗ್ಲಾದೇಶದಲ್ಲಿನ ವ್ಯವಸಾಯದಿಂದ ಬಂದ ಲಾಭ ₹ 10,000 ಸ್ವೀಕರಿಸಿ ಭಾರತಕ್ಕೆ ರವಾನಿಸಲಾಗಿದೆ.

g) ಭಾರತದಲ್ಲಿನ ಕಟ್ಟಡವನ್ನು ಮಾರಿ ಬಂದ ಆದಾಯ ₹ 2,50,000.

h) ಇಂಡೋನೇಷಿಯಾ ವ್ಯವಹಾರದಿಂದ ಬಂದ ಲಾಭ ಆದರೆ ವ್ಯವಹಾರ ನಿರ್ವಹಣೆಯು ಡೆಲ್ಲಿಯಿಂದ ನಡೆಯುತ್ತಿದೆ ₹ 40,000.

i) ಭಾರತದ ಪಾಲುಗಾರಿಕಾ ಸಂಸ್ಥೆಯಿಂದ ಬಂದ ಆದಾಯ ₹ 5,000.

j) ಭಾರತೀಯ ಸ್ಟೇಟ್ ಬ್ಯಾಂಕ್‌ನ ಉಳಿತಾಯ ಖಾತೆಯಿಂದ ಬಂದ ಬಡ್ಡಿ ₹ 1,000.

k) ಹೊರ ದೇಶದ ಕಂಪನಿಯಿಂದ ಬಂದ ಲಾಭಾಂಶ ಇಂಗ್ಲೆಂಡ್‌ನಲ್ಲಿ ಸ್ವೀಕರಿಸಲಾಯಿತು ₹ 10,000.

l) ಜರ್ಮನಿ ಅಭಿವೃದ್ಧಿ ಬಾಂಡ್‌ಗಳ ಮೇಲೆ ಬಡ್ಡಿ ಆದಾಯ ( $1/3$ ರಷ್ಟು ಭಾರತದಲ್ಲಿ ಸ್ವೀಕರಿಸಲಾಯಿತು) ₹ 51,000.

11. ಶ್ರೀ ಕಿರಣ್‌ರವರು ಬೆಂಗಳೂರಿನ ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕೆಳಕಂಡ ವಿವರಗಳಿಂದ ತೆರಿಗೆ ವರ್ಷ 2012–13 ರ ಸಂಬಳ ಆದಾಯವನ್ನು ಕಂಡು ಹಿಡಿಯಿರಿ.

a) ನಿವ್ವಳ ಸಂಬಳ ₹ 74,000. (ತೆರಿಗೆ ಬಾಬ್ತು ₹ 8,000 ಗಳನ್ನು ಕಳೆದ ನಂತರ).

b) ತುಟ್ಟಿ ಭತ್ಯೆ ತಿಂಗಳಿಗೆ ₹ 800 (ನಿವೃತ್ತಿ ಸೌಲಭ್ಯಕ್ಕೆ ಪರಿಗಣಿಸುವುದಿಲ್ಲ).

c) ಬೋನಸ್ ಮೂರು ತಿಂಗಳ ಮೂಲ ವೇತನ.

d) ಮನೆ ಬಾಡಿಗೆ ಭತ್ಯೆ ತಿಂಗಳಿಗೆ ₹ 800, ಆದರೆ ಇವರು ತಿಂಗಳಿಗೆ ₹ 1,200 ಬಾಡಿಗೆ ಪಾವತಿಸುತ್ತಿದ್ದಾರೆ ಬೆಂಗಳೂರಿನ ಅವರ ನಿವಾಸಕ್ಕೆ.

e) ಇವರ ಮಗ ಮೈಸೂರಿನ ರೆಸಿಡೆನ್ಸಿಯಲ್ ಶಾಲೆಯಲ್ಲಿ ಓದುತ್ತಿದ್ದಾರೆ ಕಂಪನಿಯು ₹ 4,000 ಶಿಕ್ಷಣ ಭತ್ಯೆ ಮತ್ತು ₹ 4,000 ಹಾಸ್ಟೆಲ್ ಭತ್ಯೆ ಕೊಡುತ್ತಿದ್ದಾರೆ.

f) ಮೂಲ ವೇತನದ 15% ರಷ್ಟನ್ನು ಕಿರಣ್ ಮತ್ತು ಕಂಪನಿಯು ಅನುಮೋದಿಸಿದ ಭವಿಷ್ಯ ನಿಧಿಗೆ ಪಾವತಿಸಿದ್ದಾರೆ.

g) ಈ ನಿಧಿಗೆ ಶೇಕಡಾ 14 ರಂತೆ ಬಡ್ಡಿ ₹ 4,200 ಸದರಿ ಆದಾಯ ವರ್ಷದಲ್ಲಿ ಜಮವಾಗಿದೆ.

h) ಸಾರಿಗೆ ವೆಚ್ಚಭತ್ಯೆ ₹ 8,500 ನೀಡಲಾಯಿತು, ಅದರಲ್ಲಿ ₹ 5,500 ರನ್ನು ಕಛೇರಿ ಸಲುವಾಗಿ ವೆಚ್ಚಮಾಡಲಾಯಿತು.

i) ಇವರು ಲಯನ್ಸ್ ಕ್ಲಬ್‌ನ ಸದಸ್ಯರಾಗಿದ್ದು ₹ 2,000 ವಾರ್ಷಿಕ ಸದಸ್ಯತ್ವದ ಶುಲ್ಕವನ್ನು ಕಂಪನಿ ಪಾವತಿಸಿದೆ.

j) ಕಿರಣ್ ಮನೆಯ ದೂರವಾಣಿಯು ಸ್ವಂತ ಮತ್ತು ಕಛೇರಿಯ ಉಪಯೋಗಕ್ಕೂ ಬಳಸಲಾಗುತ್ತಿತ್ತು ಇದರ ಬಿಲ್ ₹ 5,000 ಕಂಪನಿ ಪಾವತಿಸಿದೆ.

k) ಇವರು ₹ 510 ವೃತ್ತಿ ತೆರಿಗೆ ಪಾವತಿಸಿದ್ದಾರೆ.

12. ಶ್ರೀ ಸೂರ್ಯರವರು ಬೆಂಗಳೂರಿನಲ್ಲಿ ಮೂರು ಮನೆಗಳನ್ನು ಹೊಂದಿದ್ದಾರೆ ಅದರ ವಿವರಗಳು ಕೆಳಕಂಡಂತಿದೆ.

| ವಿವರಗಳು | ಮನೆ I | ಮನೆ II | ಮನೆ III |
|---|---|---|---|
| ಯಾವ ರೀತಿ ಉಪಯೋಗಿಸಿದೆ | ಬಾಡಿಗೆಗೆ | ಬಾಡಿಗೆಗೆ | ಸ್ವಂತ ವಾಸಕ್ಕೆ |
| ಶಿಷ್ಟ ಬಾಡಿಗೆ | 15,000 | 20,000 | – |
| ಪುರಸಭೆ ಮೌಲ್ಯ | 10,000 | 30,000 | 30,000 |
| ನಿಖರ ಬಾಡಿಗೆ | 18,000 | 18,000 | 35,000 |
| ನೈಜ ಬಾಡಿಗೆ ತಿಂಗಳಿಗೆ | 1,500 | 2,000 | – |
| ಪುರಸಭೆ ತೆರಿಗೆ ಕಟ್ಟಿದ್ದು (ಪುರಸಭೆ ಮೌಲ್ಯದ ಮೇಲೆ) | 10% | 10% | 10% |
| ದುರಸ್ತಿ | – | – | 200 |

ಸೂರ್ಯರವರು ವರ್ಷಕ್ಕೆ ಶೇಕಡಾ 20 ರಂತೆ ₹ 30,000 ವನ್ನು III ನೇ ಮನೆ ಕಟ್ಟಲು ಸಾಲ ಪಡೆದಿರುತ್ತಾರೆ. (ಸಾಲ ಪಡೆದ ದಿನಾಂಕ : 1–6–2004; ಸಾಲ ಮರುಪಾವತಿಸಿದ ದಿನಾಂಕ : 10–5–2012) ಮೇ 2009 ರಲ್ಲಿ ಕಟ್ಟಡವು ಸಂಪೂರ್ಣವಾಗಿ ನಿರ್ಮಾಣಗೊಂಡಿತ್ತು.

ಕರವರ್ಷ 2012–13ರ ಸೂರ್ಯರವರ ಮನೆಗಳಿಂದ ಬಂದ ಆದಾಯವನ್ನು ಕಂಡು ಹಿಡಿಯಿರಿ.

13. ಶ್ರೀ ಕಪೂರ್‌ರವರು ಕೆಳಕಂಡ ವಿವರಗಳನ್ನು ನೀಡಿದ್ದಾರೆ.

a) ಮೂಲ ವೇತನ ತಿಂಗಳಿಗೆ ₹ 35,000.

b) ತುಟ್ಟಿ ಭತ್ಯೆ ಮೂಲ ವೇತನದ ಶೇಕಡಾ 50 ರಷ್ಟು

c) ಮನೋರಂಜನೆ ಭತ್ಯೆ ತಿಂಗಳಿಗೆ ₹ 10,000 (ಖರ್ಚಾಗಿರುವ ಹಣ ತಿಂಗಳಿಗೆ ₹ 8,900).

d) ಕಂಪನಿಯ ಒಂದು ಮನೆಯನ್ನು ಇವರಿಗೆ ಬಾಡಿಗೆ ರಹಿತ ವಾಸಕ್ಕೆಂದು ನೀಡಲಾಗಿದೆ ಇದರ ನಿಖರ ಬಾಡಿಗೆ ತಿಂಗಳಿಗೆ ₹ 12,000.

e) ₹ 2,50,000 ಮೌಲ್ಯದ ಪೀಠೋಪಕರಣಗಳನ್ನು ಸಹ ನೀಡಲಾಗಿದೆ.

f) ಈ ಕೆಳಕಂಡ ನೌಕರರ ಸೌಲಭ್ಯಗಳನ್ನು ಕೊಡಲಾಗಿದೆ. ಇವರ ವೇತನವನ್ನು ಕಂಪನಿಯಿಂದ ಕೊಡುತ್ತಿದ್ದಾರೆ :

| | |
|---|---|
| * ಕಾವಲುಗಾರ | ತಿಂಗಳಿಗೆ ₹ 1,000 |
| * ತೋಟಗಾರ | ತಿಂಗಳಿಗೆ ₹ 750 |
| * ಸ್ವಚ್ಛತೆಯವನು | ತಿಂಗಳಿಗೆ ₹ 800 |
| * ಅಡುಗೆ ಭಟ್ಟ | ತಿಂಗಳಿಗೆ ₹ 600 |

ಕಂಪನಿಯು ಇವರಿಗೆ ಅನಿಲ, ವಿದ್ಯುಚ್ಛಕ್ತಿ ಮತ್ತು ನೀರಿನ ಸೌಲಭ್ಯವನ್ನು ಉಚಿತವಾಗಿ ನೀಡಿದೆ, ಇವುಗಳ ಮೇಲೆ ಕಂಪನಿ ವರ್ಷಕ್ಕೆ ₹ 18,000 ಖರ್ಚು ಮಾಡಿದೆ. ಕಂಪನಿಯಿಂದ ಒಂದು ದೊಡ್ಡ ಕಾರ್ (1600 CC ಸಾಮರ್ಥ್ಯಕ್ಕೆ ಮೇಲ್ಪಟ್ಟ) ಚಾಲಕನೊಂದಿಗೆ ನೀಡಲಾಗಿದೆ, ಇದರ ಖರ್ಚನ್ನು ಕಂಪನಿಯಿಂದ ಕೊಡಲಾಗುತ್ತಿದೆ. ಕಾರನ್ನು ಸ್ವಂತ ಮತ್ತು ಕಛೇರಿಯ ಉಪಯೋಗಕ್ಕೆ ಬಳಸಲಾಗುತ್ತಿದೆ. ಕಪೂರ್‌ರವರು ತನ್ನ ವೃತ್ತಿ ತೆರಿಗೆ ತಿಂಗಳಿಗೆ ₹ 500 ಪಾವತಿಸುತ್ತಿದ್ದಾರೆ. ಇವರು ಮುಂಬೈನ ರಾಯಲ್ ಏರ್‌ವೇಸ್ ಲಿಮಿಟೆಡ್‌ನಲ್ಲಿ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಕರ ವರ್ಷ 2012–13ರ ಸಂಬಳ ಆದಾಯವನ್ನು ಲೆಕ್ಕಹಾಕಿ.

14. ಡಾ|| ತ್ರಿವೇದಿರವರು ಜುಲೈ 2001 ರಲ್ಲಿ ಒಂದು ದೊಡ್ಡ ಮನೆಯನ್ನು ನಿರ್ಮಿಸಿದರು. ಅದರ ಪುರಸಭೆ ಮೌಲ್ಯ ₹ 80,000 ಇದರ ಶಿಷ್ಟ ಬಾಡಿಗೆ ಕಾಯಿದೆ ಪ್ರಕಾರ ₹ 90,000.

ಈ ಮನೆಯನ್ನು ಕೆಳಕಂಡಂತೆ ಬಳಸಲಾಗಿದೆ

a) 25% ರಷ್ಟು ಭಾಗ ಸ್ವಂತ ವಾಸಕ್ಕೆ

b) 25% ರಷ್ಟು ಭಾಗ ಸ್ವಂತ ವ್ಯಾಪಾರಕ್ಕೆ

c) 50% ರಷ್ಟು ಭಾಗ ತಿಂಗಳೊಂದಕ್ಕೆ ₹ 5,000 ಗಳಂತೆ ಬಾಡಿಗೆಗೆ ನೀಡಿದೆ.

ಈ ಕಟ್ಟಡದ ಇತರೆ ವಿವರಗಳು ಕೆಳಕಂಡಂತಿದೆ :

i) ಪುರಸಭೆ ತೆರಿಗೆ ₹ 12,800 (ಆದಾಯ ವರ್ಷ 2011–12 ರಲ್ಲಿ ಪಾವತಿ ಮಾಡಿದ ತೆರಿಗೆ ₹ 9,000)

ii) ದುರಸ್ತಿ ₹ 4,500

iii) ಅಗ್ನಿ ವಿಮೆ ಕಂತು ₹ 2,000.

ತ್ರಿವೇದಿರವರು ಮನೆ ಕಟ್ಟಲು ಹೌಸಿಂಗ್ ಬೋರ್ಡ್‌ನಿಂದ ಶೇಕಡಾ 12 ರ ಮೇರೆಗೆ 2 ಲಕ್ಷ ಸಾಲ ಪಡೆದಿದ್ದರು. ಇದರ ಆದಾಯ ವರ್ಷದ ಬಡ್ಡಿ ₹ 24,000, ಇದರಲ್ಲಿ ₹ 20,000 ಬಡ್ಡಿ ಪಾವತಿಸಲಾಗಿದೆ.

ಕರ ವರ್ಷ 2012–13ರ ತ್ರಿವೇದಿರವರ ಕಟ್ಟಡ ಸ್ವತ್ತಿನ ಆದಾಯವನ್ನು ಕಂಡು ಹಿಡಿಯಿರಿ.

---